ಒಡನೆಯೇ ಸ್ನಾನ ಮಾಡಿದರೆ ಜೀವ ತಂಪಾಗುತ್ತಿತ್ತು. ಆದರೆ ಅವನ ಹೆಂಡತಿ ಮನೆಯಲ್ಲಿರಲಿಲ್ಲ. ಎರಡು ದಿನಗಳ ಹಿಂದೆ ಅವನೊಡನೆ ಜಗಳವಾಡಿ ಮಕ್ಕಳೊಡನೆ ತವರು ಮನೆಗೆ ಓಡಿದ್ದಳು. ಅವಳು ಹೊರಟಾಗ, 'ಬಸ್ ಹತ್ತಿಸಲು ಬರಬೇಕಾ?' ಎಂದವನು ಕೇಳಿದ್ದ. ಆಕೆ, 'ಏನೂ ಅಗತ್ಯವಿಲ್ಲ. ನನಗೆ ಗೊತ್ತು' ಎಂದು ಮುಖಕ್ಕೆ ಹೊಡೆದಂತೆ ಹೇಳಿ, ದುಮುದುಮು ಹೆಜ್ಜೆ ಹಾಕುತ್ತಾ ಹೊರಬಿದ್ದಿದ್ದಳು. ಆದುದರಿಂದ ಅವನಿಗೆ ತಕ್ಷಣ ಮನೆಗೆ ಹೋಗುವ ಆತುರವಿರಲಿಲ್ಲ. ರಸ್ತೆಗೆ ಇಳಿದಾಗ ಏನು ಮಾಡುವುದೆಂದು ತಿಳಿಯದೆ ಅವನು ಒಂದು ಕ್ಷಣ ನಿಂತ. ಸಮೀಪದಲ್ಲಿ ಒಂದು ಬೇಕರಿಯಿದ್ದುದು ಅವನಿಗೆ ಗೊತ್ತಿತ್ತು. ಅಲ್ಲಿಗೆ ಹೋಗಿ ಏನಾದರೂ ಕಟ್ಟಿಸಿಕೊಂಡು ಮನೆಗೆ ಹೋಗುವುದೆಂದು ನಿಶ್ಚಯಿಸಿ ಅತ್ತ ಕಡೆಗೆ ಕಾಲು ಹಾಕಿದ.

ಬೇಕರಿಯ ಬಾಗಿಲೇನೋ ತೆರೆದಿತ್ತು. ಆದರೆ ಅದರ ಮಾಲೀಕ ಮಾತ್ರ ಕಾಣಲಿಲ್ಲ. ಒಳಗೆಲ್ಲೋ ಇರಬೇಕು ಎಂದು ಕಾದು ನಿಂತ. ಬೇಡಬೇಡವೆಂದರೂ ಗಾಜಿನ ಕಪಾಟುಗಳಲ್ಲಿ ಇಟ್ಟ ಬ್ರೆಡ್, ಬನ್, ಕೇಕುಗಳನ್ನು ನಿರ್ಯೋಚನೆಯಿಂದ ನೋಡುತ್ತಾ ನಿಂತ. ಅವನಿಗೆ ಆ ಬೇಕರಿ ಅಪರಿಚಿತವೇನಲ್ಲ. ಮೊದಲು ಎಷ್ಟೋ ಬಾರಿ ಅವನು ಅಲ್ಲಿಗೆ ಬಂದದ್ದಿತ್ತು. ಮರುದಿನ ಆಮ್ಲೆಟ್ ಜೊತೆ ಹಂಚಿಕೊಳ್ಳಲು ಬ್ರೆಡ್, ಅತಿಥಿಗಳು ಬರುತ್ತಾರೆಂದರೆ ಪ್ಲಾಸ್ಟಿಕ್ಕಿನ ಪೊಟ್ಟಣಗಳಲ್ಲಿ ಕಟ್ಟಿಟ್ಟ ಚಕ್ಕುಲಿ, ಚೂಡಾ, ಹಾಗೂ ಜ್ಯೂಸ್‌ನ ಬಾಟಲುಗಳನ್ನು ಖರೀದಿಸಲು ಅವನು ಬರುವುದಿತ್ತು. ರಾತ್ರಿಯ ಹೊತ್ತು ತುಂಬ ಹೊತ್ತಿನ ತನಕ ಆ ಬೇಕರಿ ತೆರೆದಿರುತ್ತಿತ್ತು. ಎಷ್ಟೋ ಜನರು ತಮ್ಮ ಕಾರುಗಳಲ್ಲಿಯೋ ಬೈಕ್ ಸ್ಕೂಟರ್‌ಗಳಲ್ಲಿಯೋ ಬಂದು ಅಲ್ಲಿ ತಿಂಡಿ ತಿಂದು, ಬಾದಾಮಿ ಹಾಲು ಕುಡಿದುಹೋಗುವ ಕ್ರಮವಿತ್ತು. ಗಿರಾಕಿಗಳಲ್ಲಿ ಕೆಲವರಿಗೆ ಸಿಗರೇಟು ಸೇದುವ ಚಟವಿದ್ದುದರಿಂದ ಬಾದಾಮಿ ಹಾಲನ್ನು ಕುಡಿಯುತ್ತಾ ಸಿಗರೇಟು ಸೇದುತ್ತಿದ್ದರು. ಮದುವೆಯಾಗುವ ಮೊದಲು ಅವನೂ ಹಾಗೆ ಮಾಡಿದವನೆ.

ಅವನು ಬೇಕರಿಯ ಮಾಲೀಕನನ್ನು ಕಾಯುತ್ತಾ ತುಸು ಹೊತ್ತು ನಿಂತೇ ಇರಬೇಕಾಯಿತು. ಅವನು ಅಲ್ಲಿ ನಿಂತಿದ್ದಾಗಲೇ ಕಾರ್ಪೊರೇಶನ್ನಿನ ಕಸ ಗುಡಿಸುವ ಹೆಂಗಸೊಬ್ಬಳು ರಸ್ತೆ ಗುಡಿಸುತ್ತಾ ಅಲ್ಲಿಗೆ ಬಂದಳು. ಕೃಶಕಾಯದ ಮಧ್ಯವಯಸ್ಸಿನ ಹೆಣ್ಣು. ಒಳ್ಳೆಯ ಬಟ್ಟೆಯನ್ನೇನೋ ಧರಿಸಿದ್ದಳು. ಬಹುಶಃ ಕಾರ್ಪೊರೇಶನ್ನಿನವರು ದಯಪಾಲಿಸಿದ ಯೂನಿಫಾರಂ ಇರಬೇಕು. ಅವಳು ಗುಡಿಸುತ್ತಿದ್ದುದರಿಂದ ದೂಳೆಲ್ಲ ಹಾರಾಡಿ ಅವನ ಸುತ್ತ ಹರಡಿತು. ಸರಕಾರ ಇದಕ್ಕೆಲ್ಲ ತುಂಬ ಖರ್ಚು ಮಾಡುತ್ತಿದೆಯಲ್ಲವೇ ಎಂದು ಅವನಿಗನ್ನಿಸಿತು. ಆದರೆ ಅಷ್ಟಾದರೂ ರಸ್ತೆಯ ಕಸ ಕಮ್ಮಿಯಾಗುವುದಿಲ್ಲವಲ್ಲ ಎಂದೂ ಅನ್ನಿಸಿತು. ಅವಳು ಕಾಗದದ ಚೂರುಗಳು, ಪ್ಲಾಸ್ಟಿಕ್, ಸಿಗರೇಟಿನ ತುಂಡುಗಳು, ಬಿಸ್ಕೀಟ್ ಪ್ಯಾಕಿನ ಕವರುಗಳು, ಜ್ಯೂಸ್ ಬಾಟಲಿಗಳು, ಎಲ್ಲವನ್ನೂ ಗುಡಿಸಿ, ಬೇಕರಿಯ ಹೊರಗೆ ರಸ್ತೆಯಂಚಿನಲ್ಲಿಟ್ಟ ಕಸದ ತೊಟ್ಟಿಗೆ ಹಾಕಿ ಹೊರಟು ಹೋದಳು.

ನಿಂತು ನಿಂತು ಸಾಕಾಯಿತು ಅವನಿಗೆ. ತಡೆಯಲಾರದೆ, 'ಒಳಗೆ ಯಾರೂ ಇಲ್ಲವೇ?' ಎಂದು ಅವನು ಕೂಗಿ ಕರೆದ. ಆ ಕರೆಯ ತುಸು ಹೊತ್ತಿನ ಬಳಿಕ ಒಳಗಿನ ಕೋಣೆಯ ಪರದೆ ಸರಿಸಿ, ಒಬ್ಬಳು ಹುಡುಗಿ ಬಂದು, 'ಏನು ಬೇಕು?' ಎಂದು ಕೇಳಿದಳು. ಅವನು ಇಲ್ಲಿಯ ತನಕ ಅವಳನ್ನು ಅಲ್ಲಿ ನೋಡಿರಲಿಲ್ಲ. ಕೆಂಪು ಚೂಡಿದಾರ. ಉದ್ದನೆಯ ಕೂದಲ ರಾಶಿ. ಬೆಳ್ಳಗಿನ ಲಕಲಕಿಸುವ ಮೈಬಣ್ಣ. ಸಾಕಷ್ಟು ಸುಂದರಿಯಾಗಿಯೇ ಇದ್ದಳು. ಮಾಲೀಕನ ಮಗಳಿರಬೇಕು